ಇಂದ್ರಿಯಾನುಭವಗಳ ಲೋಕವನ್ನೇ ನೆಮ್ಮಿಕೊಳ್ಳುತ್ತವೆ. ಅವನ ಕಾವ್ಯಗಳಲ್ಲಿ ಅಮೂರ್ತವೂ ಇಂದ್ರಿಯಗ್ರಾಹ್ಯವಾದ ಪ್ರತಿಮೆಗಳಲ್ಲಿಯೇ ನಿಜವಾಗುತ್ತವೆ. ಅವನ ಪ್ರಕಾರ ಒಂದೇ ತತ್ತ್ವವು ಮೂಡಿಸುವ ತಿಳಿವಳಿಕೆ ಕೂಡ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ. ಧಾರ್ಮಿಕವಾದ ತಿಳಿವಳಿಕೆಯೂ ಸ್ವಾನುಭವ ಮತ್ತು ಸ್ವ-ಭಾವಗಳ ಮೂಸೆಯಲ್ಲಿಯೇ ಕಾದು ಕರಗಿ ಕೊನೆಗೆ ಮೈಪಡೆಯುತ್ತದೆ. ವೃಷಭನಾಥನ ಮಾತುಗಳು, ಬಾಹುಬಲಿ ಮತ್ತು ಭರತ ಮತ್ತು ಅವನ ಇತರ ಮಕ್ಕಳಲ್ಲಿ ವಿಭಿನ್ನವಾದ ಪ್ರತಿಕ್ರಿಯೆಗಳನ್ನೇ ಮೂಡಿಸುತ್ತವೆ. ಆದ್ದರಿಂದಲೇ ಒಬ್ಬನು ಕಂಡುಕೊಂಡ ಸತ್ಯವು ಇನ್ನೊಬ್ಬನಿಗೆ ಮಾರ್ಗದರ್ಶಕವಾಗಲಾರದು, ಆಗಬಾರದು. ಗುರುವಿನ ಗುಲಾಮನಾಗುವುದರಿಂದ ಯಾರೊಬ್ಬನಿಗೂ ಬಿಡುಗಡೆಯು/ಮುಕ್ತಿಯು ಸಿಗುವುದಿಲ್ಲ. ಆದ್ದರಿಂದಲೇ ಪಂಪನದು ಭಕ್ತಿಪೂರ್ವಯುಗದ ಸೆನ್ಸಿಬಿಲಿಟಿ. ಪಂಪಭಾರತದಲ್ಲಿ ಕೃಷ್ಣನು ಹಿನ್ನೆಲೆಗೆ ಸರಿಯುವುದು ಕೂಡ ಈ ಸತ್ಯಕ್ಕೆ ಹಿಡಿದ ಕನ್ನಡಿಯೇ ಸರಿ. ಇದು ಕುಮಾರವ್ಯಾಸನಿಗೂ ಪಂಪನಿಗೂ ಇರುವ ಮುಖ್ಯ ವ್ಯತ್ಯಾಸಗಳಲ್ಲಿ ಒಂದು. ಆದ್ದರಿಂದಲೇ ಭಕ್ತಿ ಮತ್ತು ಶರಣಾಗತಿಗಳಿಗೆ ತಮ್ಮನ್ನು ತಾವು ತೆತ್ತುಕೊಳ್ಳಲಾರದ ಆಧುನಿಕರಿಗೆ ಪಂಪನೇ ಹತ್ತಿರವಾಗುತ್ತಾನೆ.



ಅಷ್ಟೇ ಅಲ್ಲ, ಅನುಭವಗಳಿಗೆ ಪಕ್ಕಾಗುವ ವ್ಯಕ್ತಿಯಲ್ಲಿ ಮೂಡುವ ತಿಳಿವಳಿಕೆ ಕೂಡ ಅಚಾನಕ್ಕಾಗಿ ನಡೆಯುವ ಪವಾಡವಲ್ಲ. ಅದು ಹಲವು ಅನುಭವಗಳ ಬೆಂಕಿಹಾದಿಯಲ್ಲಿ ನಡೆಯುವುದರ ಮೂಲಕ ನಿಧಾನವಾಗಿ ಮೂಡುತ್ತದೆ. ಆದಿಪುರಾಣದ ವೃಷಭನಾಥನು ತೀರ್ಥಂಕರನಾಗುವದಕ್ಕಿಂತ ಮೊದಲು ಭವಾವಳಿಗಳ ಸರಣಿಯಲ್ಲಿ ಚಲಿಸಿ ಪಕ್ವವಾಗಿರುತ್ತಾನೆ. 'ನೀಲಾಂಜನೆಯ ಪ್ರಸಂಗ'ವು ನಿಡಿದಾದ ಪಯಣದ ಕೊನೆಯ ಹೆಜ್ಜೆಯೇ ವಿನಾ ಅದಷ್ಟೇ ಪ್ರಯಾಣವಲ್ಲ. ಇಲ್ಲಿಯೂ ಪಂಪನ ನಿಲುವು ನಮ್ಮ ಅನಿಸಿಕೆಗಳಿಗೆ ನಿಕಟವಾಗುತ್ತದೆ.

ಇಲ್ಲಿಯೇ ಅನುಭವಗಳ ಮೂಲಕ ಮೂಡುವ ಗ್ರಹಿಕೆಗೂ ಜ್ಞಾನದ ಮೂಲಕ ಮೂಡುವ ಗ್ರಹಿಕೆಗೂ ಇರುವ ಅಂತರವನ್ನು ಗಮನಿಸಬೇಕು. ಭಾವನೆಗಳ ಲೋಕವು ಇವೆರಡರ ನಡುವೆ ಸೇತುವೆ ಕಟ್ಟುತ್ತಲೇ ಎರಡನ್ನೂ ಮೀರಿ ನಿಲ್ಲಬಹುದು. ಅದು ಇಂಟ್ಯೂಟಿವ್ ಆದುದು. ಕೆಲವೊಮ್ಮೆ ಲೇಖಕನು ಸ್ವಂತದ ಅಥವಾ 'ಸ್ವಂತ ಸಮುದಾಯ'ಗಳ ಅನುಭವದ್ವೀಪಗಳಲ್ಲಿ ಸೆರೆಯಾಗಿಬಿಡುತ್ತಾನೆ. ಅವುಗಳ ಆಚೆಗಿನ ಅನುಭವಗಳ ಲೋಕವು ಅವನಿಗೆ ನಿಲುಕುವುದಿಲ್ಲ. ಈ ದಾಟುವಿಕೆಯು ಸಾಧ್ಯವಾಗುವುದು ಆಲೋಚನೆ ಮತ್ತು ಅನುಕಂಪಗಳಿಂದ ಮಾತ್ರ. ನಿಜವಾದ ಸಾಹಿತ್ಯದಲ್ಲಿ ಇವೆಲ್ಲವೂ ಒಟ್ಟಿಗೆ ಸಾಧ್ಯವಾಗುತ್ತದೆ. ಅಜೆಂಡಾಗಳ ಬೇಲಿಯೊಳಗೆ ನಿಂತಿರುವ ನಮ್ಮ ಕಾಲದ ಸಾಹಿತ್ಯವು ಹಲವು ಸಲ ವಿಸ್ತಾರವನ್ನು ಕಳೆದುಕೊಂಡಿದೆ. ಪಂಪನ ಬರವಣಿಗೆಯು ಕೆಲವು ಭಾಗಗಳು ಈ ಬಿಕ್ಕಟ್ಟುಗಳನ್ನು ಯಶಸ್ವಿಯಾಗಿ ಮೀರುವುದರಿಂದಲೇ ನಮಗೆ ಮುಖ್ಯವಾಗುತ್ತವೆ.

ಆ. ಭೋಗಮಗ್ನವಾದ ಜೀವನಶೈಲಿ ಮತ್ತು ಅದರಿಂದ ಹೊಂದಿದ ತ್ಯಾಗಮಗ್ನ ಜೀವನಕ್ರಮಗಳು